Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ ೩೮/೨೦೧೮

ಪ್ರಾ.ಸಾ. ೩ ಚಾ.ಸಾ. 5

| | | |
|---|---|---|
| ಹೆಸರು | : | ಸೈದಪ್ಪ |
| ತಂದೆಯ ಹೆಸರು | : | ಹಣಮಂತ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸ | : | ಹೊನಗೇರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 20-12-2023

ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಮೃತ ತಿಮ್ಮಪ್ಪ ನನ್ನ ಬಾಮೈದ. ಚಾಸಾ-೧ ಶರಣಪ್ಪ ನನ್ನ ಅಣ್ಣ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ದಿನಾಂಕಃ ೧೨-೦೨-೨೦೧೮ ರಂದು ರಾತ್ರಿ ಬಳಿಚಕ್ರ ಗ್ರಾಮದ ಬ್ಯಾಂಕಿನ ಮುಂದೆ ಆರೋಪಿತರು ಮತ್ತು ತಿಮ್ಮಪ್ಪನ ನಡುವೆ ಮಾತು ಮಾತಿಗೆ ಜಗಳ ಆಯಿತು. ಅಂಜಪ್ಪ ಮತ್ತು ಅವರ ಅಣ್ಣ ಅವರು ಹೊಡೆದಿದ್ದರಿಂದ ಆತ ಸಿ.ಸಿ. ರಸ್ತೆಯ ಮೇಲೆ ಬಿದ್ದಿದ್ದು ತಲೆಯ ಬೆಂಬಾಕ್ಕೆ ಪೆಟ್ಟಾಗಿ ಆತ ತೀರಿಕೊಂಡ. ಈ ವಿಷಯವನ್ನು ತಿಮ್ಮಪ್ಪನ ಹೆಂಡತಿ ಹೆಂಡತಿ ಹೇಳಿದಳು. ನನಗೆ ರಾತ್ರಿ ೮-೦೦ ಗಂಟೆಗೆ ಫೋನ್ ಮಾಡಿ ವಿಷಯ ತಿಳಿಸಿದರು. ಆತನ ಸಾವಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರೆ ಕಾರಣ. ನಾನು ಬೆಂಗಳೂರಿನಲ್ಲಿದಾಗ ರಾಯಚೂರಿನ ಆಸ್ಪತ್ರೆಗೆ ಆತನನ್ನು ಕರೆದುಕೊಂಡು ಹೋಗಿದ್ದು ಅಲ್ಲಿ ಆಗುವದಿಲ್ಲ ಎಂದು ಹೇಳಿದ್ದರಿಂದ ತಿಮ್ಮಪ್ಪನನ್ನು ಬಳ್ಳಾರಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ಬಳ್ಳಾರಿಯ ಆಸ್ಪತ್ರೆಗೆ ಹೋಗಿ ಬೇಟಿ ಮಾಡಿ ನಂತರ ಅಲ್ಲಿಂದ ಬೆಂಗಳೂರಿನ ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿಯೇ ಮೃತಪಟ್ಟನು. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಜಿ.ಬಿ.ಆರ್. ವಕೀಲರಿಂದ

೨. ನನ್ನ ಸ್ವಂತ ಊರು ಹೊನಗೇರಾ ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ. ತಿಮ್ಮಪ್ಪನ ಹೆಂಡತಿ ಲಕ್ಷ್ಮಿ ನನಗೆ ರಾತ್ರಿ ೮-೦೦ ಗಂಟೆಗೆ ಫೋನ್ ಮಾಡಿ ಹೇಳಿದಳು. ಈ ರೀತಿ ಹೊಡೆದಿದ್ದಾರೆ ಏಟಾಗಿದೆ ಯಾದಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ ಎಂದು ಹೇಳಿದಳು. ಯಾವ ಕಾರಣಕ್ಕೆ ಎಂದು ಹೇಳಿಲ್ಲ. ಮಾತು ಮಾತಿಗೆ ಜಗಳ ಆಯಿತು ಎಂದು ಹೇಳಿದಳು. ನಾನು ಬೆಂಗಳೂರಿನಿಂದ ತಕ್ಷಣ ಬರಲಿಲ್ಲ. ಯಾದಗಿರಿಯ ಸರಕಾರಿ ಆಸ್ಪತ್ರೆಯಲ್ಲಿ ತೋರಿಸಿದ್ದರು. ವೈದ್ಯರ ಮುಂದೆ ಯಾವ ಕಾರಣಕ್ಕೆ ಘಟನೆ ನಡೆದಿದೆ ಎಂದು ಹೇಳಿದ್ದ ಬಗ್ಗೆ ನನಗೆ ತಿಳಿಸಿಲ್ಲ. ನಾನು ನೇರ ಬಳ್ಳಾರಿಗೆ ಬಂದೆ. ಬಳ್ಳಾರಿಯಲ್ಲಿ ನನ್ನ ಅತ್ತೆ, ತಿಮ್ಮಣ್ಣನ ಹೆಂಡತಿ ಲಕ್ಷ್ಮಿ ಮತ್ತು ಒಬ್ಬ ಹುಡುಗ ಇದ್ದರು. ಬೆಂಗಳೂರಿಗೆ ನಾನು, ನನ್ನ ಅತ್ತೆ, ಲಕ್ಷ್ಮಿ ಕರೆದುಕೊಂಡು ಹೋದೆವು. ಮಾರ್ಗ ಮಧ್ಯದಲ್ಲಿ ತಿಮ್ಮಣ್ಣ ಮಾತನಾಡಲಿಲ್ಲ. ನಾವು ಸುಗುಣಾ ಆಸ್ಪತ್ರೆಯ ಅಂಬುಲೆನ್ಸ ತೆಗೆದುಕೊಂಡು ಊರಿಗೆ ಬಂದೆವು. ದಿನಾಂಕಃ ೧೨-೦೨-

2018 ರಿಂದ ತಿಮ್ಮಪ್ಪನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುವವರೆಗೆ ಯಾರಾದರೂ ದೂರು ಕೊಟ್ಟಿದ್ದರೋ ಇಲ್ಲವೋ ಎಂದು ಗೊತ್ತಿಲ್ಲ. ಶವವನ್ನು ಊರಿಗೆ ತಂದಾಗ ನಾವು 4 ಜನ ಬಂದೆವು.

3. ತಿಮ್ಮಣ್ಣ ನನ್ನ ಜೊತೆಯಲ್ಲಿಯೇ ಬೆಂಗಳೂರಿನಲ್ಲಿ ವಾಸವಿದ್ದ ಆತ ಕುಡಿದು ಅಡ್ಡಾಡುತ್ತಿರಲಿಲ್ಲ. ಆತ ನನ್ನ ಜೊತೆಯಲ್ಲಿ ವಾಸವಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಣ್ಣ ಯಾವಾಗಲೂ ಕುಡಿದು ರಸ್ತೆಯಲ್ಲಿ ಬಿದ್ದಿರುತ್ತಿದ್ದ ಎಂದರೆ ಸರಿಯಲ್ಲ. ಆ ದಿನ ತಿಮ್ಮಣ್ಣ ಅತಿಯಾಗಿ ಕುಡಿದು ಮೋರಿಯಲ್ಲಿ ಬಿದ್ದು ತೀರಿಕೊಂಡ ಎಂದರೆ ಸರಿಯಲ್ಲ. ಆರೋಪಿತರಿಗೂ, ಆತನ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಶರಣಪ್ಪನ ತಾಯಿ ತಿಮ್ಮಪ್ಪನ ತಂದೆಯ ಅಕ್ಕ ಎಂದರೆ ಸರಿ. ಆರೋಪಿತರ ಅಜ್ಜಿ ಹೆಸರು ಮಲ್ಲಮ್ಮ ಎಂದರೆ ಗೊತ್ತಿಲ್ಲ. ಆರೋಪಿತರ ತಂದೆಯನ್ನು ಮನೆಯ ಅಳಿಯ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ನಮ್ಮ ಮಾವನಿಗೂ ಮತ್ತು ಆರೋಪಿತರ ತಂದೆಗೂ ಪಾಲು ವಿಷಯಲ್ಲಿ ಸುಮಾರು ವರ್ಷಗಳಿಂದ ಜಗಳ ಇತ್ತು ಎಂದರೆ ಸರಿಯಲ್ಲ. ನಮ್ಮ ಮಾವ ಆರೋಪಿತರಿಗೆ ಹೊಲ ಮಾಡುತ್ತೇನೆ ಎಂದು ಹೇಳಿ ಇದುವರೆಗೂ ಮಾಡಿಲ್ಲ ಎಂದರೆ ಸುಳ್ಳು. ಆ ಮನೆತನದ ವಿಷಯಗೊತ್ತಿದ್ದರೂ ಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಯ್ಯ ಅವರ ಮನೆಯಲ್ಲಿ ಕಾಲು ಜಾರಿ ಮೋರಿಯಲ್ಲಿ ಬಿದ್ದು ಮೃತಪಟ್ಟಿದ್ದು ಆರೋಪಿತರಿಗೂ ಅವನ ಸಾವಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಜಮೀನಿನ ಬಗ್ಗೆ ಸಿವಿಲ್ ಕೋರ್ಟನಲ್ಲಿ ದಾವೆ ನಡೆದಿವೆ ಎಂದರೆ ಸರಿಯಲ್ಲ. ತಿಮ್ಮಣ್ಣನಿಗೆ ಗಾಯಗಳು ಯಾವ ರೀತಿ ಆಗಿವೆ ಎಂದು ಆತನ ಹೆಂಡತಿ ಹೇಳಿದ್ದರಿಂದ ಮಾತ್ರ ಗೊತ್ತು ಎಂದರೆ ಸರಿ. ನಾನು ನಮ್ಮ ಮಾವನ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಸಂಬಂಧ ಜಗಳ ಇದುದ್ದರಿಂದ ಆರೋಪಿತರ ವಿರುದ್ಧ ಸುಳ್ಳು ಕೇಸ ಹಾಕಿದ್ದೇವೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.